# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010.

www.souharda.coop, Ph: 080-23378375-80, Email:souharda@souharda.coop


**ಸಂಖ್ಯೆ: ಸುತ್ತೋಲೆ/05/ನಿ.ಹೂ/2018–19** **ದಿನಾಂಕ: 25.05.2018**

## ಸುತ್ತೋಲೆ–05

**ವಿಷಯ: ಸೌಹಾರ್ದ ಸಹಕಾರಿಗಳ ನಿಧಿಗಳ ಹೂಡಿಕೆಯ ಕುರಿತಾದ ಮಾರ್ಗಸೂಚಿಗಳು**

**–ಪ್ರಸ್ತಾವನೆ–**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 18ರಲ್ಲಿ ಸೌಹಾರ್ದ ಸಹಕಾರಿಗಳ ನಿಧಿಗಳ ಹೂಡಿಕೆ ಕುರಿತಂತೆ ಸ್ಪಷ್ಟ ಪ್ರಾವಧಾನವಿರುತ್ತದೆ. ಆದರೂ ಸೌಹಾರ್ದ ಸಹಕಾರಿಗಳು ಸಲ್ಲಿಸಿರುವ ಲೆಕ್ಕಪರಿಶೋಧನಾ ವರದಿ, ಪರಿವೀಕ್ಷಣೆಯ ಸಂದರ್ಭದಲ್ಲಿ ಕೆಲವೊಂದು ಸೌಹಾರ್ದ ಸಹಕಾರಿಗಳು ಕಲಂ 18ರ ವ್ಯತಿರಿಕ್ತವಾಗಿ ಹೂಡಿಕೆ ಮಾಡುತ್ತಿರುವುದು ಸಂಯುಕ್ತ ಸಹಕಾರಿ ಗಮನಕ್ಕೆ ಬಂದಿರುತ್ತದೆ. ಅವುಗಳಲ್ಲಿ ಉದಾಹರಿಸಬಹುದಾದ ಉಲ್ಲಂಘನೆಗಳು ಕೆಲವೊಂದು ಸೌಹಾರ್ದ ಸಹಕಾರಿಗಳು ಪ್ರಾಥಮಿಕ ಸಹಕಾರಿ/ಸಹಕಾರ ಸಂಘ/ಸಕ್ಕರೆ ಕಾರ್ಖಾನೆಗಳಲ್ಲಿ ಹೂಡಿಕೆ ಮಾಡುತ್ತಿರುವುದನ್ನು ಗಮನಿಸಲಾಗಿದೆ. ಕೆಲವೊಂದು ಸೌಹಾರ್ದ ಸಹಕಾರಿಗಳು ಶೇರು ಮಾರುಕಟ್ಟೆ, ಮ್ಯುಚುವಲ್ ಫಂಡ್, ಯುಲಿಫ್ ಲಿಂಕ್ಡ್ ಯೋಜನೆಗಳಲ್ಲಿ ಹೂಡಿಕೆ ಮಾಡಿರುವುದು ಗಮನಿಸಲಾಗಿದೆ. ಇನ್ನೂ ಕೆಲವೊಂದು ಸೌಹಾರ್ದ ಸಹಕಾರಿಗಳು ನಿಧಿಯನ್ನು ಹೂಡಿಕೆ ಮಾಡಿ ಬಂದಿರುವ ಲಾಭ/ನಷ್ಟವನ್ನು ಆದಾಯ/ಜಮಾ ತಖ್ತೆಯಲ್ಲಿ ಪ್ರತ್ಯೇಕವಾಗಿ ಜಮೆ ಮಾಡದೆ ಇರುವುದನ್ನು ಗಮನಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಸೌಹಾರ್ದ ಸಹಕಾರಿಗಳ ನಿಧಿಗಳ ಹೂಡಿಕೆ ಕುರಿತಂತೆ ಮಾರ್ಗಸೂಚಿಯನ್ನು ರೂಪಿಸಿ ಈ ಸುತ್ತೋಲೆ ಹೊರಡಿಸಿದೆ.

**ಸೌಹಾರ್ದ ಸಹಕಾರಿಗಳ ನಿಧಿಗಳ ಹೂಡಿಕೆಯ ಕುರಿತಾದ ಮಾರ್ಗಸೂಚಿಗಳು**

**(ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997ರ ಕಲಂ 53 (7)(ಎ) ಅಡಿ)**

**ಮಾರ್ಗಸೂಚಿಗಳು:**

1. ಸೌಹಾರ್ದ ಸಹಕಾರಿಗಳು ನಿಧಿಗಳನ್ನು ಸರ್ಕಾರದಿಂದ ಅನುಮೋದಿತವಾದ ಭದ್ರತೆಗಳಲ್ಲಿ ಅಥವಾ ಸಹಕಾರಿ ಬ್ಯಾಂಕು ಅಥವಾ ಅನುಸೂಚಿತ ಬ್ಯಾಂಕ್‌ನಲ್ಲಿ ಮಾತ್ರ ಹೂಡಿಕೆ ಮಾಡತಕ್ಕದ್ದು.
2. ಸೌಹಾರ್ದ ಸಹಕಾರಿಗಳು ಪ್ರಾಥಮಿಕ ಸಹಕಾರಿ/ಸಹಕಾರ ಸಂಘ/ಸಕ್ಕರೆ ಕಾರ್ಖಾನೆ ಅಥವಾ ಇತರೆ ಯಾವುದೇ ಸಂಸ್ಥೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
3. ಸೌಹಾರ್ದ ಸಹಕಾರಿಗಳು ಶೇರು ಮಾರುಕಟ್ಟೆ/ಮ್ಯೂಚುವಲ್ ಫಂಡ್/ಬಿಟ್ ಕಾಯಿನ್/ಕ್ರಿಪ್ಟೊ ಕರೆನ್ಸ್/ಯುಲಿಫ್ ಲಿಂಕ್ಡ್ ಯೋಜನೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
4. ಸೌಹಾರ್ದ ಸಹಕಾರಿಗಳು ಹೂಡಿಕೆಯಿಂದ ಬಂದಿರುವ ಲಾಭ/ನಷ್ಟವನ್ನು ಆದಾಯ/ವೆಚ್ಚ ತಖ್ತೆಯಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.
5. ಮೇಲ್ಕಂಡ ಮಾರ್ಗಸೂಚಿಗಳು ಕ.ಸೌ.ಸ ಅಧಿನಿಯಮ,1997ರಲ್ಲಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳಿಗೆ ಅನ್ವಯಿಸತಕ್ಕದ್ದಲ್ಲ.

ಈ ಮಾರ್ಗಸೂಚಿಗಳನ್ನು ಸಂಯುಕ್ತ ಸಹಕಾರಿಯ ಪರವಾಗಿ ನನ್ನ ಮೊಹರು ಹಾಗೂ ಸಹಿಯೊಂದಿಗೆ ಇಂದು ಅಂದರೆ, 25 ಮೇ 2018ರಂದು ನೀಡಲಾಗಿದೆ.

ಸಹಿ/–

(ಶರಣಗೌಡ ಜಿ. ಪಾಟೀಲ್)
ವ್ಯವಸ್ಥಾಪಕ ನಿರ್ದೇಶಕರು